## ಮತಾಂತರವೆಂಬ ಮತಾಂಧತೆ

ಹಿಂದುಳಿದ ದೇಶಗಳು ಎಂದು ಪಟ್ಟಿಕಟ್ಟಿ ಆಯಾ ದೇಶದ ಸಂಸ್ಕೃತಿ, ಧರ್ಮಗಳನ್ನು ತುಚ್ಛೀಕರಿಸಿ ತಮ್ಮ ಪಾಶ್ಚಾತ್ಯ ಸಂಸ್ಕೃತಿಯೇ ಉತ್ತಮವೆಂದು ಆಮಿಷ ಒಡ್ಡುವ ಕ್ರೈಸ್ತ ಧರ್ಮೀಯರಿಂದ ಮತಾಂತರದ ಪ್ರಯತ್ನ ವಿವಿಧ ಕಡೆಗಳಲ್ಲಿ ನಡೆಯುತ್ತಲೇ ಇದೆ. ಆದರೆ ಅಂತಹ ಒಂದು ಬಲಾತ್ಕಾರದ ಯತ್ನ ಮೈಸೂರು ಮೆಡಿಕಲ್ ಕಾಲೇಜಿನ ನರ್ಸಿಂಗ್ ಹಾಸ್ಟೆಲ್‌ನಲ್ಲಿ ಕೂಡ ಇತ್ತೀಚೆಗೆ ನಡೆದಿದೆ ಎನ್ನುವುದು ಬೆಚ್ಚಿಬೀಳಿಸುವ ವಿಚಾರ. ಕಳೆದ ವರ್ಷ ನರ್ಸಿಂಗ್ ಶಿಕ್ಷಣದ ಮೂರನೆಯ ವರ್ಷದ ವಿದ್ಯಾರ್ಥಿನಿಯೊಬ್ಬಳು ತನ್ನ ಕಾಲೇಜಿನ ಪ್ರಾಂಶುಪಾಲರಾದ ಒಬ್ಬ ಕ್ರೈಸ್ತ ಮಹಿಳೆಯ ಬಲಾತ್ಕಾರವನ್ನು ಸಹಿಸಲಾರದೆ, ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ದಿಗ್ಭ್ರಮೆ ಮೂಡಿಸಿದೆ. ಇದು ಬಲಾತ್ಕಾರವಾಗಿ ಮತಾಂತರಗೊಳಿಸುವ ಒಂದು ದೊಡ್ಡ ಜಾಲವೇ ಈ ಕೃತ್ಯದ ಹಿಂದಿರುವುದನ್ನು ಹೊರಗೆಳೆಯಿತು. ಬಹಳ ವಿದ್ಯಾರ್ಥಿನಿಯರು ಈ ಬಗೆಯ ಬಲಾತ್ಕಾರದಿಂದ ಮನೋವ್ಯಥೆಗೆ ಒಳಗಾಗಿರುವುದೂ ಕಂಡು ಬಂದಿತು. ನರ್ಸಿಂಗ್ ಕಾಲೇಜಿನ ಪ್ರಿನ್ಸಿಪಾಲರನ್ನು ವಜಾ ಮಾಡುವಂತೆ ವಿದ್ಯಾರ್ಥಿಗಳಿಂದ ಒತ್ತಡ ಕೂಡ ಬಂದಿತು.

ಬಹಳ ಹಿಂದಿನಿಂದಲೂ ಈ ದೇಶವನ್ನು ಕ್ರೈಸ್ತೀಕರಣಗೊಳಿಸುವ ಸನ್ನಾಹ ನಡೆಯುತ್ತಲೇ ಇದೆ. ಅದಕ್ಕೆಂದೇ ಸ್ವಾಮಿ ವಿವೇಕಾನಂದರು ಅಮೆರಿಕನ್ನರಿಗೆ ಬುದ್ಧಿವಾದ ಹೇಳಿದರು, "ನಮಗೆ ಬೇಕಾಗಿರುವುದು ಧರ್ಮವಲ್ಲ, ಬಡತನದ ನಿವಾರಣೆ " ಎಂದು. ಮತ್ತೊಂದು ಕಡೆ ಅವರು ಉದ್ಗರಿಸುತ್ತಾರೆ, "ಹಿಂದೂ ಧರ್ಮದ ಮೇಲೆ ಎರಚಿರುವಷ್ಟು ಮಣ್ಣು, ಹಿಂದೂ ಮಹಾಸಾಗರದ ತಳದಲ್ಲಿರುವ ಮಣ್ಣಿಗಿಂತ ಅಧಿಕ" ಎಂದು.

ಮತಾಂತರವನ್ನು ವಿರೋಧಿಸಿ ಪ್ರತಿಭಟನೆಗಳು ನಡೆಯುತ್ತಲೇ ಇದ್ದರೂ ಗುಪ್ತ ರೀತಿಯಲ್ಲಿ, ದೂರದ ಹಳ್ಳಿಗಳಲ್ಲಿ, ಗುಡ್ಡಗಾಡುಗಳಲ್ಲಿ ಮತಾಂತರದ ಕಾರ್ಯ ನಿರಂತರವಾಗಿ ನಡೆದುಕೊಂಡು ಬರುತ್ತಲೇ ಇದೆ. ಬಡತನದ, ಅಜ್ಞಾನದ ಅಂಧಕಾರದಲ್ಲಿ ನರಳುತ್ತಿರುವ ಜನತೆ, ಹಣ, ಉದ್ಯೋಗ ಮುಂತಾದ ಆಮಿಷಗಳಿಗೆ ಒಳಗಾಗಿ ಮತಾಂತರ ಹೊಂದುತ್ತಾರೆ. ಕೆಲವೊಮ್ಮೆ ಬೆದರಿಕೆ ಮತ್ತು ಬಲಾತ್ಕಾರಗಳೂ ನಡೆಯುತ್ತವೆ.

ಏಸುಕ್ರಿಸ್ತನು ತ್ಯಾಗ ಮತ್ತು ಪ್ರೀತಿಯ ಸಂಕೇತ. ಆದರೆ ಅಂತಹ ಮಹಾತ್ಮರು, ಇತರ ಧರ್ಮಗಳಲ್ಲಿ, ಸಂಸ್ಕೃತಿಗಳಲ್ಲಿ ಇರಲಿಲ್ಲವೆಂದು ತಿಳಿಯುವುದು ಮೂಢತನ. ಅವನ ಹಿರಿಮೆಯನ್ನು ಪ್ರಚಾರ ಮಾಡಲು ಮತ್ತೊಬ್ಬರನ್ನು ತೆಗಳುವುದು ನೀಚತನವಲ್ಲವೇ ? ಆತನ ಧರ್ಮವನ್ನು ಪ್ರಚುರಗೊಳಿಸುವ ರೀತಿ ಇಷ್ಟೊಂದು ಕೀಳು ಮಟ್ಟಕ್ಕೆ ಇಳಿಯಬೇಕೇನು? ಏಸು ಈ ಬಲಾತ್ಕಾರವನ್ನು ಒಪ್ಪುವನೇ? ಕ್ರೈಸ್ತರಾದವರು ಮಾತ್ರ ಏಸುವಿಗೆ ಪ್ರಿಯರೇ ಅಥವಾ ಕ್ರೈಸ್ತರಾದವರು ಮಾತ್ರ ಅವನನ್ನು ಪೂಜಿಸಬೇಕೆ ?

ಕೃಷ್ಣ, ಬುದ್ಧ, ಕ್ರಿಸ್ತ, ಮೊದಲಾದ ಮಹಾಪುರುಷರು ವಿಶ್ವವಿಭೂತಿಗಳು. ಅವರನ್ನು ಯಾವುದೇ ಮತದ ಸಂಕುಚಿತ ಪರಿಧಿಯೊಳಗೆ ಇಟ್ಟು ನಿರ್ಬಂಧಿಸುವುದು ಮತಾಂಧತೆ ಎನ್ನಿಸಿಕೊಳ್ಳುತ್ತದೆ. ಅದಕ್ಕಿಂತ ಘೋರವಾದ ಪಾತಕ ಎಂದರೆ, ತನ್ನ ಧರ್ಮವನ್ನು ಬಿಟ್ಟು ಮತ್ತೊಂದಕ್ಕೆ ಸೇರುವಂತೆ ಯಾವುದೇ ವ್ಯಕ್ತಿಯನ್ನು ಬಲಾತ್ಕರಿಸುವುದು ಮತ್ತು ತಮ್ಮ ಧರ್ಮ ಒಂದೇ ನಿಜವಾದ ಧರ್ಮ ಎಂದು ಘೋಷಿಸುವುದು, ಅಲ್ಲವೇ ? ✡

## ಮೊಬೈಲ್ ಫೋನಿನಿಂದ ಮಾರಕ ರೋಗಗಳು

ಮೊಬೈಲ್ ಫೋನುಗಳು ಕಳೆದ ಕೆಲವು ವರ್ಷಗಳಿಂದ ನಾವು ಜೀವಿಸುವ ಶೈಲಿಯನ್ನೇ ಮಾರ್ಪಾಡು ಮಾಡಿಬಿಟ್ಟಿವೆ. ವ್ಯಕ್ತಿಯೊಬ್ಬನು ವರ್ತಮಾನದಲ್ಲಿರಲು ಸಾಧಾರಣವಾಗಿ ಇಷ್ಟಪಡುವುದಿಲ್ಲ, ಅಂದರೆ ತನ್ನೆದುರಿಗೆ ಇರುವವರೊಡನೆ ಲೋಕಾಭಿರಾಮವಾಗಿ ಮಾತನಾಡಲು ಸಮಯವಿಲ್ಲ ಎನ್ನುತ್ತಾನೆ. ಆದರೂ ಮೊಬೈಲ್ ಫೋನಿನ ಆಚೆ ಕಡೆ ಇರುವ ಅದೃಷ್ಟ ವ್ಯಕ್ತಿಗಳ ಜೊತೆ ಗಂಟೆಗಟ್ಟಲೆ ಮಾತನಾಡುತ್ತಾನೆ. ಇದು ಪಲಾಯನವಾದವಲ್ಲವೆ? ಮಾನವೀಯ ಬಾಂಧವ್ಯಗಳಿಗೂ ಸಂಪರ್ಕಕ್ಕೂ ತಂತ್ರಜ್ಞಾನವೇ ಸೇತುವೆಯಾಗಬೇಕಾದ ದುರದೃಷ್ಟ ನಮ್ಮದಾಗಿದೆ. ಮೊಬೈಲ್ ಫೋನ್ ವಿಷಯದಲ್ಲಿ ನಾವು ತಿಳಿದುಕೊಂಡಂತೆ ಎಲ್ಲವೂ ಸರಿಯಾಗಿಲ್ಲ. ಅವುಗಳಿಂದ ಹಲವು ಮಾರಕರೋಗಗಳು ಉಂಟಾಗಬಹುದೆಂದು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಅಕ್ಟೋಬರ್ ೩೧, ೨೦೦೪ ರ ಟೈಮ್ಸ್ ಆಫ್ ಇಂಡಿಯಾದ ಭಾನುವಾರದ ಪುರವಣಿಯಲ್ಲಿ ಪ್ರಕಟಿಸಲಾದ ಕೆಲವು ಸತ್ಯಾಂಶಗಳನ್ನು ಪಟ್ಟಿಮಾಡೋಣ. ಮೊಬೈಲ್ ಫೋನಿನಿಂದ ಹೊರಹೊಮ್ಮುವ ಮ್ಯಾಗ್ನೆಟಿಕ್ ಕಿರಣಗಳಿಂದ ಭೀಕರ ರೋಗಗಳಾದ ಆಲ್‌ಜೈಮರ್ಸ್ ಮತ್ತು ಪಾರ್ಕಿನ್‌ಸನ್ ವ್ಯಾಧಿಗಳು ಬರುವ ಸಾಧ್ಯತೆ ಅತಿ ಹೆಚ್ಚು. ಅಮೆರಿಕದಲ್ಲಿ ೨೦೦೪ನೆ ಇಸವಿಯಲ್ಲಿ ಪ್ರಕಟವಾದ ವರದಿಯ ಪ್ರಕಾರ ಸೆಲ್ ಫೋನುಗಳ ಸುತ್ತಲೂ ಉಂಟಾಗುವ ಅಯಸ್ಕಾಂತ ಕ್ಷೇತ್ರವು ಡಿ.ಎನ್.ಎ.ಗಳನ್ನು ಹಾಳು ಮಾಡಬಹುದು ಮತ್ತು ಮೆದುಳಿನ ಜೀವಾಂಗಗಳನ್ನು ಸಾಯಿಸಬಹುದು. ವಿಪರೀತ ಸೆಲ್ ಫೋನನ್ನು ಉಪಯೋಗಿಸುವವರು ಇತರರಿಗಿಂತ ಎರಡು ಪಟ್ಟು ಹೆಚ್ಚು ಮರಣಾಂತಕ ರಸ್ತೆ ಅಪಘಾತಗಳಿಗೆ ಒಳಗಾಗಿರುವ ಸಂಭವವಿದೆ. ಸೆಲ್ ಫೋನ್‌ಗಳ ಅಂಟೆನಾದಿಂದ ಹೊರಸೂಸುವ ರೇಡಿಯೇಷನ್ ಕಿರಣಗಳು ಜನರಲ್ಲಿ ಅದರಲ್ಲೂ ಮಕ್ಕಳಲ್ಲಿ ಕ್ಯಾನ್ಸರ್ ಉಂಟಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಅವು ಹೊರಸೂಸುವ ಮೈಕ್ರೋವೇವ್ ರೇಡಿಯೇಷನ್‌ಗಳು ತಲೆಯಲ್ಲಿ ಉಷ್ಣಕುಳಿ (Hot Spot) ಗಳನ್ನು ಉಂಟುಮಾಡುತ್ತವೆ ಎಂದು ಒಂದು ಬ್ರಿಟಿಷ್ ಮತ್ತು ಎರಡು ಅಮೆರಿಕನ್ ಅಧ್ಯಯನಗಳು ತಿಳಿಸುತ್ತವೆ. ಸ್ವೀಡನ್ ಮತ್ತು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆಸಲಾದ ಅಧ್ಯಯನಗಳು ಮೊಬೈಲ್ ಫೋನ್‌ಗಳು ಹೊರಸೂಸುವ ಕಿರಣಗಳು ನಿದ್ರೆಯನ್ನು ಹಾಳುಗೆಡವುತ್ತವೆ ಎಂದು ಹೇಳಿವೆ. ನರಮಂಡಲದ ಸೆಲ್‌ಗಳ ಮೇಲೆ ಪ್ರಭಾವ ಬೀರುವ ಸೆಲ್ ಫೋನಿನ ತರಂಗಗಳು ಆ ಎಲ್ಲ ರೋಗಗಳಿಗೆ ಮೂಲಕಾರಣವಾಗಬಹುದೆಂದು ವಿಜ್ಞಾನಿಗಳ ಸ್ಪಷ್ಟ ನಿಲುವು. **ಅದಕ್ಕೆಂದೇ ಇದಕ್ಕೆ ಸೆಲ್ ಫೋನ್ ( ಫೋನನ್ನು ಮಾರಿಬಿಡಿ) ಎಂದು ಹೆಸರು ಇಟ್ಟರೇನೋ?**




ಅತಿಯಾದರೆ ಅಮೃತವೂ ವಿಷವಾಗುತ್ತದೆ ಎನ್ನುತ್ತದೆ ಒಂದು ಹಳೆಯ ಗಾದೆ. ಆದರೆ ಸೆಲ್ ಫೋನುಗಳ ವಿಷಯದಲ್ಲಿ ವಿಷವೇ ಅತಿಯಾದಂತೆ ಆಗಿಬಿಟ್ಟಿದೆಯಲ್ಲ? ಯಾವುದೇ ಹೊಸ ತಂತ್ರಜ್ಞಾನ ನಮ್ಮ ಈಗಿರುವ ಜೀವನಶೈಲಿಯನ್ನು ಉತ್ತಮಪಡಿಸಬೇಕೇ ಹೊರತು ನಾವು ಅದರ ಆಕರ್ಷಣೆಗೆ ಬಿದ್ದು, ನಮ್ಮ ಜೀವನವನ್ನು ವಿಕೃತಗೊಳಿಸಿಕೊಳ್ಳಬಾರದು. ಹಾಗೆ ಮಾಡಿದರೆ ಹೊಸಹೊಸ ಮಾರಕ ರೋಗಗಳೂ ಕೂಡ ನಮ್ಮನ್ನು ಕಾಡಲು ಸಿದ್ಧವಾಗಿವೆ. ಮುಂದೆ ಸೆಲ್ ಫೋನಿನಿಂದಾಗಿ ನಮ್ಮ ದೇಹಕ್ಕೆ ಕೃತಕ ಸೆಲ್‌ಗಳನ್ನೇ ಅಳವಡಿಸಿಕೊಳ್ಳಬೇಕಾಗಬಹುದು, ಎಚ್ಚರ ! ✡